# ಸ್ಪೀಕರ್ ವಿರುದ್ಧ ಸುಪ್ರೀಂಗೆ ದೂರು

## ಅತೃಪ್ತ ಶಾಸಕರ ರಾಜೀನಾಮೆ | ಇಂದು ಮಹತ್ವದ ವಿಚಾರಣೆ

■ ವಿಜಯವಾಣಿ ಸುದ್ದಿಜಾಲ ನವದೆಹಲಿ 11/7/19

ಅತೃಪ್ತ ಶಾಸಕರಲ್ಲಿ ಕೇವಲ ಐವರ ರಾಜೀನಾಮೆ ಕ್ರಮಬದ್ಧ ಎಂದು ಸ್ವೀಕರಿಸಿದ ಸ್ಪೀಕರ್ ರಮೇಶ್‌ಕುಮಾರ್ ನಡೆ ಪ್ರಶ್ನಿಸಿ, 10 ಶಾಸಕರು ಸುಪ್ರೀಂಕೋರ್ಟ್ ಕದ ಬಡಿದಿದ್ದಾರೆ. ತುರ್ತು ವಿಚಾರಣೆಗೆ ನಿರಾಕರಿಸಿ ಗುರುವಾರ ವಿಚಾರಣೆ ನಡೆಸುತ್ತೇವೆ ಎಂದು ಕೋರ್ಟ್ ತಿಳಿಸಿದ್ದು, ಸ್ಪೀಕರ್ ಕ್ರಮದ ಬಗ್ಗೆ ಮುಖ್ಯ ನ್ಯಾಯಮೂರ್ತಿಗಳ ಅಭಿಪ್ರಾಯವೇನಿರಬಹುದು ಎಂಬುದು ಕುತೂಹಲ ಕೆರಳಿಸಿದೆ. ಅಲ್ಪಮತಕ್ಕೆ ಬಿದ್ದ ಸರ್ಕಾರ ರಕ್ಷಿಸಲೆಂದೆ ಸ್ಪೀಕರ್ ಪಕ್ಷಪಾತ ಧೋರಣೆ ಪ್ರದರ್ಶಿಸಿದ್ದಾರೆ ಎಂದು ಆರೋಪಿಸಿರುವ ಶಾಸಕರು, ಅನರ್ಹ ಎಂಬ ಕಾನೂನು ವಿರೋಧಿ ಕ್ರಮಕ್ಕೆ ಮುಂದಾಗಬಾರದು ಎಂದು ಸ್ಪೀಕರ್‌ಗೆ ಆದೇಶಿಸಬೇಕೆಂದು ಅರ್ಜಿಯಲ್ಲಿ ವಿನಂತಿಸಿಕೊಂಡಿದ್ದಾರೆ.



ಮುಖ್ಯ ನ್ಯಾಯಮೂರ್ತಿ ರಂಜನ್ ಗೊಗೊಯ್ ನೇತೃತ್ವದ ತ್ರಿಸದಸ್ಯ ಪೀಠದ ಮುಂದೆ ಅರ್ಜಿ ಪ್ರಸ್ತಾಪಿಸಿದ ಕೇಂದ್ರ ಸರ್ಕಾರದ ಮಾಜಿ ಅಟಾರ್ನಿ ಜನರಲ್ ಮುಕುಲ್ ರೋಹಟ್ಗಿ, ಕರ್ನಾಟಕದಲ್ಲಿ ಸರ್ಕಾರ ಪತನದ ಹಾದಿಯಲ್ಲಿದೆ. ಶಾಸಕರ ರಾಜೀನಾಮೆ ಸ್ವೀಕರಿಸದೆ ಸ್ಪೀಕರ್ ಕಾನೂನು ವಿರೋಧಿ ಕ್ರಮ ಕೈಗೊಂಡಿದ್ದಾರೆ. ತಕ್ಷಣವೇ ಈ ಅರ್ಜಿ ವಿಚಾರಣೆ ನಡೆಸಿ ಶಾಸಕರಿಗೆ ನ್ಯಾಯ ಒದಗಿಸಬೇಕಿದೆ. ಇಂದು ಅಥವಾ ನಾಳೆ ವಿಚಾರಣೆ ನಡೆಸಲೇಬೇಕು ಎಂದು ವಿನಂತಿಸಿಕೊಂಡರು. 'ಇಂದು ಸಾಧ್ಯವಿಲ್ಲ. ನಾಳೆ ಪರಿಶೀಲಿಸುತ್ತೇನೆ' ಎಂದು ಮುಖ್ಯ ನ್ಯಾಯಮೂರ್ತಿ ತಿಳಿಸಿದರು. ರೋಹ್ಟಗಿ ವಾದ ಮುಂದುವರಿಸಿದರೂ, 'ನಾಳೆಗೂ ಸ್ವಲ್ಪ ವಿಚಾರಗಳನ್ನು ಉಳಿಸಿಕೊಳ್ಳಿ' ಎಂದು ವಿಚಾರಣೆ ಮುಂದೂಡಿದರು.

**ಅರ್ಜಿಯಲ್ಲಿ ಇನ್ನೇನಿದೆ:** ಜು.6ರಂದು ಕೆಲ ಶಾಸಕರು ರಾಜೀನಾಮೆ ನೀಡುವ ಸಲುವಾಗಿ ಸ್ಪೀಕರ್ ಕಚೇರಿಗೆ ತೆರಳಿದ್ದರು. ಇದರ ಅರಿವಿದ್ದ ಸ್ಪೀಕರ್, ತಕ್ಷಣವೇ ಕಚೇರಿಯಿಂದ ಹೊರ ನಡೆದರು. ನಂತರ ನಮ್ಮ ಸಂಪರ್ಕಕ್ಕೆ ಸಿಗಲೇ ಇಲ್ಲ. ಹೀಗಾಗಿ ವಿಧಾನಸಭೆ ಕಾರ್ಯದರ್ಶಿಗೆ ರಾಜೀನಾಮೆ ಸಲ್ಲಿಸಿ ನಂತರ ರಾಜ್ಯಪಾಲರನ್ನೂ ಭೇಟಿ ಮಾಡಿ ರಾಜೀನಾಮೆ ನೀಡಿದರು. ಈ ಪತ್ರಗಳನ್ನು ರಾಜ್ಯಪಾಲರು ಸ್ಪೀಕರ್ ಕಚೇರಿಗೂ ರವಾನಿಸಿದ್ದರು ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ. ಜು.12ರಂದು ಅಧಿವೇಶನ ಆರಂಭಗೊಳ್ಳಲಿದ್ದು, ರಾಜೀನಾಮೆ ನೀಡಿರುವ ಶಾಸಕರು ಅಂದೇ ತಮ್ಮ ಮುಂದೆ ಹಾಜರಿರಬೇಕು ಎಂದು ಸ್ಪೀಕರ್ ಸೂಚಿಸಿದ್ದಾರೆ. ಈ ಮಧ್ಯೆ, ಈ ಶಾಸಕರನ್ನು ಅನರ್ಹಗೊಳಿಸಬೇಕೆಂದು ಕಾಂಗ್ರೆಸ್ ಮನವಿ ಸಲ್ಲಿಸಿರುವುದರಿಂದ ಶಾಸಕರ ಅನರ್ಹತೆಗೆ ಸ್ಪೀಕರ್ ಕ್ರಮ ಕೈಗೊಂಡರೂ ಅಚ್ಚರಿ ಇಲ್ಲ ಎಂದು ದೂರಲಾಗಿದೆ.